




ವಿವಿಧತೆಯಲ್ಲಿ ಏಕತೆ
ಎನ್ನುವ ಮಾತು
ಸೌಂದರ್ಯಕ್ಕೂ ಅನ್ವಯ.

ಚಾರ್‌ಮಿನಾರ್ ಸಮೀಪದ
ಪೇಟೆ ಬೀದಿಯಲ್ಲಿ
ಸೌಂದರ್ಯ ಸಮರದ
ಸ್ಪರ್ಧಿಗಳ ಸುತ್ತಾಟ

**ಹೈದರಾಬಾದ್‌ನಲ್ಲಿ ವಿಶ್ವಸುಂದರಿ ಸ್ಪರ್ಧೆಯ ಎಪ್ಪತ್ತೆರಡನೇ ಆವೃತ್ತಿ ನಡೆಯುತ್ತಿದೆ. ಪ್ರತಿಭಟನೆಯ ಕ್ಷೀಣ ಸ್ವರಗಳ ಜೊತೆಜೊತೆಗೇ ಸೌಂದರ್ಯ ಸಮರದ ಕಾವು ಹೆಚ್ಚುತ್ತಿದೆ.**




ಸಂಘಟನೆಗಳು 'ವಿಶ್ವಸುಂದರಿ' ಸ್ಪರ್ಧೆಗೆ ತೀವ್ರ ವಿರೋಧವ್ಯಕ್ತಪಡಿಸಿದ್ದವು. ಸ್ಪರ್ಧೆಯ ಉದ್ಘಾಟನೆಗೆ ವರನಟ ರಾಜ್‌ಕುಮಾರ್ ಅವರನ್ನು ಕರೆತಂದು ಪ್ರತಿಭಟನೆಯ ಸೊಲ್ಲಡಗಿಸಲು ಅಮಿತಾಭ್ ಪ್ರಯತ್ನಿಸಿದ್ದರು. ಆ ಆಹ್ವಾನವನ್ನು ಸ್ಪಷ್ಟವಾಗಿ ನಿರಾಕರಿಸುವ ಮೂಲಕ ರಾಜ್‌ಕುಮಾರ್ ಕನ್ನಡ–ಕನ್ನಡಿಗರ ಹಿತಾಸಕ್ತಿಯ ಕುರಿತ ತಮ್ಮ ಬದ್ಧತೆ ವ್ಯಕ್ತಪಡಿಸಿದ್ದರು. ವಿರೋಧದಿಂದಾಗಿ ಅಮಿತಾಭ್ ಹೈರಾಣಾಗಿದ್ದರು; ಆರ್ಥಿಕ ಸಂಕಷ್ಟವನ್ನೂ ಎದುರಿಸಿದರು. ಅಂತಿಮವಾಗಿ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ, ಸಾವಿರಾರು ಪೊಲೀಸರ ಬಿಗಿ ಭದ್ರತೆಯಲ್ಲಿ ಸ್ಪರ್ಧೆ ನಡೆದಿತ್ತು. ಆ ಸ್ಪರ್ಧೆಯಲ್ಲಿ ಗ್ರೀಕ್‌ನ ಚೆಲುವೆ ವಿಜೇತಳಾಗಿದ್ದಳು.

ವಿಶ್ವಸುಂದರಿ ಸ್ಪರ್ಧೆಗೆ ಭಾರತದಲ್ಲಿ ವಿರೋಧ ಮೊದಲಿನಿಂದಲೂ ಇದ್ದೇ ಇದೆ. ಈ ಸ್ಪರ್ಧೆ ನಮ್ಮ ಸಂಸ್ಕೃತಿಗೆ ಸರಿಹೊಂದುವುದಿಲ್ಲ ಎಂದು ದೂರುವವರಿದ್ದಾರೆ. ಸೌಂದರ್ಯ ಸ್ಪರ್ಧೆಯ ಹೆಸರಿನಲ್ಲಿ ಹೆಣ್ಣುಮಕ್ಕಳ ಶೋಷಣೆ ನಡೆಯುತ್ತದೆ ಎಂದು ಮಹಿಳಾ ಸಂಘಟನೆಗಳು ಸೊಲ್ಲೆತ್ತುತ್ತಿರುವುದೂ ಇದೆ. ಆದರೆ, ಸ್ಪರ್ಧೆಯಲ್ಲಿ ಗೆಲುವಿನ ಕಿರೀಟ ತೊಟ್ಟ ಭಾರತೀಯ ಸುಂದರಿಯರನ್ನು ದೇಶ ಅಭಿಮಾನದಿಂದ ನಡೆಸಿಕೊಂಡಿದೆ. ಈವರೆಗೆ ಆರು ಭಾರತೀಯರು ವಿಶ್ವಸುಂದರಿ ಕಿರೀಟ ತೊಟ್ಟಿದ್ದಾರೆ. 1966ರಲ್ಲಿ ರೀಟಾ ಫರಿಯಾ ಅವರಿಂದ ಆರಂಭಗೊಂಡ ಈ ಪರಂಪರೆಯಲ್ಲಿ ಎದ್ದು ಕಾಣುವ ಮುಖ ಐಶ್ವರ್ಯಾ ರೈ ಅವರದ್ದು. ಡಯಾನಾ ಹೇಡನ್, ಯುಕ್ತಾ ಮುಖಿ, ಪ್ರಿಯಾಂಕಾ ಚೋಪ್ರಾ ಹಾಗೂ ಮಾನುಷಿ ಚಿಲ್ಲರ್ 'ವಿಶ್ವಸುಂದರಿ' ಪಟ್ಟಕ್ಕೆ ಸಂದಿರುವ ಉಳಿದ ಭಾರತೀಯರು.

ಕರ್ನಾಟಕ ಮೂಲದ ಐಶ್ವರ್ಯಾ ರೈ 1994ರಲ್ಲಿ ವಿಶ್ವಸುಂದರಿ ಸ್ಪರ್ಧೆಯಲ್ಲಿ ಗೆಲ್ಲುವ ಮೂಲಕ ಸೌಂದರ್ಯಕ್ಕೆ ಹೊಸ ಭಾಷ್ಯ ಬರೆದರು; ಜನಸಾಮಾನ್ಯರ ಗಮನವನ್ನೂ ಸೆಳೆದರು. ನಂತರದ ದಿನಗಳಲ್ಲಿ ಅವರು ಬಾಲಿವುಡ್‌ನಲ್ಲಿ ಬೇಡಿಕೆಯ ತಾರೆಯಾಗಿಯೂ ಗುರ್ತಿಸಿಕೊಂಡರು.

ಕಳೆದ ವರ್ಷ ಮುಂಬಯಿಯಲ್ಲಿ ನಡೆದ ಸ್ಪರ್ಧೆಗೂ ಸಂಸ್ಕೃತಿ ಹೆಸರಿನಲ್ಲಿ ಪ್ರತಿರೋಧ ವ್ಯಕ್ತವಾಗಿತ್ತು. ಮಹಿಳಾ ಶೋಷಣೆ ಹೆಸರಿನಲ್ಲೂ ವಿಶ್ವಸುಂದರಿ ಸ್ಪರ್ಧೆಗೆ ಪ್ರತಿ ವರ್ಷವೂ ವಿರೋಧ ವ್ಯಕ್ತವಾಗುತ್ತದೆ. ಪ್ರಸಕ್ತ ಹೈದರಾಬಾದ್‌ನಲ್ಲಿ ನಡೆಯುತ್ತಿರುವ ಸ್ಪರ್ಧೆಗೂ ವಿರೋಧದ ಧ್ವನಿಗಳು ವ್ಯಕ್ತವಾಗಿವೆ. ಭಾರತ ಮತ್ತು ಪಾಕಿಸ್ತಾನದ ನಡುವೆ ಕ್ಷೋಭೆಯ ವಾತಾವರಣ ಇರುವಾಗ ಈ ಸ್ಪರ್ಧೆ ಅನಗತ್ಯವಾಗಿತ್ತು ಎಂದು ಹೇಳುವವರೂ ಇದ್ದಾರೆ. ಆದರೆ, ಜಾಗತೀಕರಣ ಮತ್ತು ಉದಾರೀಕರಣದ ಗಾಳಿ ವಿಶ್ವವನ್ನೆಲ್ಲ ಆವರಿಸಿಕೊಂಡಿರುವ ಸಂದರ್ಭದಲ್ಲಿ 'ವಿಶ್ವಸುಂದರಿ' ಸ್ಪರ್ಧೆಯನ್ನು ಭಾರತವೂ ಸೇರಿದಂತೆ ಜಗತ್ತಿನ ಬಹುತೇಕ ದೇಶಗಳು ತಾತ್ವಿಕವಾಗಿ ಒಪ್ಪಿಕೊಂಡಿವೆ; ಪ್ರತಿಭಟನೆಯ ಧ್ವನಿಗಳು ಕ್ಷೀಣವಾಗಿವೆ.

ಸೌಂದರ್ಯ ಸಮರದ ಕಾವು ಹೈದರಾಬಾದ್‌ನಲ್ಲಿ ನಿಧಾನವಾಗಿ ಏರುತ್ತಿದೆ. 130 ದೇಶಗಳ ಚೆಲುವೆಯರು ಸ್ಪರ್ಧಾ ಕಣದಲ್ಲಿ ಠಳಾಯಿಸುತ್ತಿದ್ದಾರೆ. ವಿವಿಧ ದೇಶಗಳ ಸ್ಪರ್ಧಿಗಳು ಶಾಪಿಂಗ್ ಹೆಸರಿನಲ್ಲಿ ಹೈದರಾಬಾದ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ಚಾರ್‌ಮಿನಾರ್ ಸಮ್ಮುಖದಲ್ಲಿ ಫೋಟೊ ಶೂಟ್ ನಡೆದಿದೆ.

ರಾಜಸ್ಥಾನದ ಯುವತಿ ನಂದಿನಿ ಗುಪ್ತಾ ಈ ಬಾರಿ ವಿಶ್ವಸುಂದರಿ ಸ್ಪರ್ಧೆಯಲ್ಲಿ ಭಾರತವನ್ನು ಪ್ರತಿನಿಧಿಸುತ್ತಿದ್ದಾಳೆ. 'ವಿವಿಧತೆಯಲ್ಲಿ ಏಕತೆ'ಯನ್ನು ಭಾರತದ ಆತ್ಮ ಎನ್ನುವ ನಂದಿನಿ, ಈ ದೇಶದ ಪ್ರತಿ ಮೂಲೆಯೂ ಸಂಸ್ಕೃತಿ, ಕರುಣೆಯ ಕಥೆ ಹೇಳುತ್ತದೆ ಎಂದು ದೇಶವನ್ನು ಬಣ್ಣಿಸಿದ್ದಾರೆ. ಆಧುನಿಕತೆ ಮತ್ತು ಸಾಂಪ್ರದಾಯಿಕತೆಯ ಸಮೀಕರಣದ ರೂಪದಲ್ಲಿ ಭಾರತವನ್ನು ಬಿಂಬಿಸುವ ಅವರು 'ವಿಶ್ವಸುಂದರಿ' ಸ್ಪರ್ಧೆಯ ಏಳನೇ ಕಿರೀಟವನ್ನು ಭಾರತಕ್ಕೆ ತಂದುಕೊಡುವರೇ? ಮೇ 31ರಂದು ಹೊಸ ವಿಶ್ವಸುಂದರಿಯ ಘೋಷಣೆಯಾಗಲಿದೆ.

ಪ್ರತಿಕ್ರಿಯಿಸಿ: feedback@sudha.co.in